ಪಿ ಡಬ್ಲು 1

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

ದಿನಾಂಕಃ 12-11-2021

**ಪಾಟೀಸವಾಲುಃ** 14 ಹಾಗೂ 16 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಮ್.ಎನ್. ವಕೀಲರಿಂದ,

ಈರ ಯಾನೆ ಬೋಳ ವೆಂಕಟರಮಣ ನಾಯ್ಕ ನಮ್ಮ ಮುತ್ತಜ್ಜ ಎಂದರೆ ನಿಜ. ನಮ್ಮ ಮುತ್ತಜ್ಜನಿಗೆ ಸೋಮಯ್ಯ ಹಾಗೂ ದುರ್ಗಪ್ಪ ಎನ್ನುವ ಇಬ್ಬರು ಗಂಡು ಮಕ್ಕಳು ಇದ್ದರು. ನಮ್ಮ ಮುತ್ತಜ್ಜನಿಗೆ ಇಬ್ಬರು ಹೆಣ್ಣು ಮಕ್ಕಳು ಇದ್ದರು ಎಂದು ಹೇಳುತ್ತಾರೆ ಆದರೆ ಅವರ ಬಗ್ಗೆ ನನಗೆ ಗೊತ್ತಿಲ್ಲ. ಈಗ ಆ ಇಬ್ಬರು ಹೆಣ್ಣು ಮಕ್ಕಳು ತೀರಿಕೊಂಡಿರುತ್ತಾರೆ. ಒಬ್ಬ ಹೆಣ್ಣು ಮಗಳನ್ನು ಭಟ್ಕಳ ತಾಲೂಕು ಕಾಯ್ಕಿಣಿಗೆ ಮದುವೆ ಮಾಡಿಕೊಡಲಾಯಿತು. ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ಕಾಯ್ಕಿಣಿಗೆ ಕೊಟ್ಟ ನಮ್ಮ ಮುತ್ತಜ್ಜನ ಮಗಳಿಗೆ ಮಕ್ಕಳು ಇದ್ದು ಅವರು ಕಾಯ್ಕಿಣಿಯಲ್ಲಿ ಈಗ ಇರುತ್ತಾರೆ. ನಮ್ಮ ಮುತ್ತಜ್ಜನ ಇನ್ನೊಬ್ಬ ಮಗಳನ್ನು ಎಲ್ಲಿಗೆ ಮದುವೆ ಮಾಡಿಕೊಡಲಾಗಿದೆ ಎಂದು ಹಾಗೂ ಅವರ ಹೆಸರು ನನಗೆ ಗೊತ್ತಿಲ್ಲ. ಸದ್ರಿಯವರಿಗೆ ಮಕ್ಕಳು ಇರುತ್ತಾರೆಯೇ ಎಂದರೆ ಇರಬಹುದು. ನಮ್ಮ ಮುತ್ತಜ್ಜನ ಇಬ್ಬರು ಹೆಣ್ಣು ಮಕ್ಕಳನ್ನು ಇಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯ ಹಾಗೂ ದುರ್ಗಪ್ಪನಿಗೆ ಅವರ ಪೂರ್ವಜರಿಂದ ಬಂದಿರುತ್ತದೆ. ಬ ಮತ್ತು ಕ ಶೆಡ್ಯೂಲ್ ಆಸ್ತಿಗಳು ನಮ್ಮ ಮುತ್ತಜ್ಜ ಈರನಿಗೆ ಭೂನ್ಯಾಯ ಮಂಡಳಿಯಿಂದ ಮಂಜೂರಾಗಿದ್ದವು. ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಮುತ್ತಜ್ಜ ಈರನ ಹೆಸರಿಗೆ ಭೂನ್ಯಾಯ ಮಂಡಳಿಯಲ್ಲಿ ಮಂಜೂರಾಗಿರುವುದಿಲ್ಲ. ನಮ್ಮ ಅಜ್ಜ ದಾವಾ ಅ ಶೆಡ್ಯೂಲ್ ಆಸ್ತಿಯನ್ನು ಮಂಜೂರಿ ಮಾಡಲು ಕೋರಿ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ನಮ್ಮ ಮುತ್ತಜ್ಜನಿಗೆ ಸದ್ರಿ ಅರ್ಜಿ ಮೇರೆಗೆ ದಾವಾ ಅ ಶೆಡ್ಯೂಲ್ ಆಸ್ತಿ ಮಂಜೂರಿಯಾಗಿರುವುದಿಲ್ಲ . ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯ ಹಾಗೂ ದುರ್ಗಪ್ಪನಿಗೆ ಸಾಮ್ಯಾಕವಾಗಿ ಮಂಜೂರಾಗಿರುತ್ತದೆ. ದಾವಾ ಅ ಶೆಡ್ಯೂಲ್ ಆಸ್ತಿ ಸೋಮಯ್ಯ ಹಾಗೂ ದುರ್ಗಪ್ಪನ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ ಅವರ ಹೆಸರಿಗೆ ಆ ಹೆಸರಿಗೆ ಆ ಆಸ್ತಿ ಮಂಜೂರಾಗಿದ್ದು ನಮ್ಮ ಮುತ್ತಜ್ಜ ಈರನಿಗೆ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ .

ಸೋಮಯ್ಯನ ಜೀವಿತಾವಧಿಯಲ್ಲಿ ದುರ್ಗಪ್ಪನ ವಾರಸುದಾರರಾದ 5 ರಿಂದ 10 ನೇ ಪ್ರತಿವಾದಿಗಳು ದಾವಾ ಅ ಶೆಡ್ಯೂಲ್ ಆಸ್ತಿಯಲ್ಲಿ 36 ಗುಂಟೆಯನ್ನು 1 ನೇ ಪ್ರತಿವಾದಿಗೆ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿದ್ದರು ಎಂದರೆ ನಿಜ . ಸೋಮಯ್ಯನ ಜೀವಿತಾವಧಿಯಲ್ಲಿ ದಾವಾ ಅ ಶೆಡ್ಯೂಲ ಆಸ್ತಿಯಲ್ಲಿ ಉಳಿದ 36 ಗುಂಟೆಯನ್ನು ದುರ್ಗಪ್ಪನ ವಾರಸುದಾರರಾದ 5 ರಿಂದ 10 ಪ್ರತಿವಾದಿಗಳು 12 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿರುತ್ತಾರೆ ಎಂದರೆ ನಿಜ . ನೋಂದಾಯಿತ ದಾನ ಪತ್ರ ಹಾಗೂ

ನೋಂದಾಯಿತ ಕ್ರಯ ಪತ್ರದ ಬಗ್ಗೆ ಗೊತ್ತಿದೆ . ಸಾಕ್ಷಿಯು ಮುಂದುವರಿದು 2015-16 ರಲ್ಲಿ ದಾಖಲೆ ತೆಗೆದು ನೋಡಿದಾಗ ಆ ರೀತಿ ನೊಂದಾಯಿತ ದಾನ ಪತ್ರ ಹಾಗೂ ಕ್ರಯ ಪತ್ರದ ಮೂಲಕ ಕೊಟ್ಟಿರುವ ವಿಷಯ ನಮಗೆ ಗೊತ್ತಾಗಿರುತ್ತದೆ. 2015-16 ರಲ್ಲಿ ನಾನು ನೋಡಿದ ಸದ್ರಿ ದಾಖಲೆಗಳನ್ನು ಇಲ್ಲಿ ಹಾಜರು ಮಾಡಿರುತ್ತೇನೆ. ಸದ್ರಿ ವಿಷಯ ಗೊತ್ತಾದ ತಕ್ಷಣ ಅವುಗಳನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಕೇಸು ಹಾಕಿರುವುದಿಲ್ಲ. 11 ಹಾಗೂ 12 ನೇ ಪ್ರತಿವಾದಿಗಳು ನೋಂದಾಯಿತ ದಾನ ಪತ್ರ ಹಾಗೂ ಕ್ರಯ ಪತ್ರ ಪಡೆದ ನಂತರ ಪ್ರತ್ಯೇಕವಾಗಿ ದಾವಾ ಅ ಶೆಡ್ಯೂಲ್ ಆಸ್ತಿಯನ್ನು ಅವರು ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ನಿಜ. 11 ಹಾಗೂ 12 ನೇ ಪ್ರತಿವಾದಿಗಳು ದಾವಾ ಅ ಶೆಡ್ಯೂಲ್ ಆಸ್ತಿಯ ಸ್ವಾಧೀನ ಹೊಂದಿರುವುದನ್ನು ನಾವು ಅವರನ್ನು ಪ್ರಶ್ನಿಸಿರುತ್ತೇವೆ. ಅವರ ವಿರುದ್ಧ ನಾವು ಪೊಲೀಸರಿಗೆ ದೂರು ಕೊಟ್ಟಿಲ್ಲ. ನೊಂದಾಯಿತ ದಾನ ಪತ್ರ ಹಾಗೂ ನೊಂದಾಯಿತ ಕ್ರಯ ಪತ್ರ ಮಾಡಿಕೊಡುವ ಸಂದರ್ಭದಲ್ಲಿಯೇ ಅವುಗಳ ಬಗ್ಗೆ ನಮಗೆ ಗೊತ್ತಿದ್ದ ಕಾರಣದಿಂದ ನಾವು ಆ ಸಂದರ್ಭದಲ್ಲಿ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಸೋಮಯ್ಯು ನಮ್ಮ ಅಜ್ಜ ಇರುತ್ತಾನೆ. 12 ನೇ ಪ್ರತಿವಾದಿಯ ಪರಿಚಯ ನನಗೆ ಇರುವುದಿಲ್ಲ. 12 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ ಎಂದು ನಾವು ದಾವೆಯಲ್ಲಿ ಹೇಳಿರುತ್ತೇವೆ. ಈ ದಾವೆಯನ್ನು ಸಲ್ಲಿಸುವಾಗ 12 ನೇ ಪ್ರತಿವಾದಿಯ ಬಗ್ಗೆ ವಿಚಾರಿಸಿ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ನನಗೆ 14 ಹಾಗೂ 16 ನೇ ಪ್ರತಿವಾದಿಯ ಪರಿಚಯ ಇರುವುದಿಲ್ಲ. 14 ಹಾಗೂ 16 ನೇ ಪ್ರತಿವಾದಿಗಳು 12 ನೇ ಪ್ರತಿವಾದಿಯಿಂದ ಕ್ರಮವಾಗಿ 8 ಹಾಗೂ 4 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನಿಜ . 14 ಹಾಗೂ 16 ನೇ ಪ್ರತಿವಾದಿಗಳು ತಾವು ಕ್ರಯಕ್ಕೆ ಪಡೆದ ನಂತರ ತಮ್ಮ ಜಾಗಗಳಲ್ಲಿ ಈಗ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ . 2019-20 ರಲ್ಲಿ ನಾನು ದಾವಾ ಅ ಶೆಡ್ಯೂಲ್ ಆಸ್ತಿಯನ್ನು ನೋಡಿದ್ದೆನು. ನಮ್ಮ ಅಜ್ಜ ತನ್ನ ಜೀವಿತಾವಧಿಯಲ್ಲಿ ಮಾರಾಟ ಮಾಡಿರುವುದನ್ನು ಈಗ ನಮಗೆ ಪ್ರಶ್ನಿಸಲು ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಮುತ್ತಜ್ಜ ಈರನಿಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ . ಸೋಮಯ್ಯು ಹಾಗೂ ದುರ್ಗಪ್ಪ ತಮ್ಮ ಕುಟುಂಬದ ಅವಶ್ಯಕತೆಗಾಗಿ ದಾವಾ ಅ ಶೆಡ್ಯೂಲ್ ಆಸ್ತಿಯನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ . ದಾವಾ ಅ ಶೆಡ್ಯೂಲ್ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಆಗಿಲ್ಲದೇ ಇರುವುದರಿಂದ ಹಾಗೂ ಅದು ಸೋಮಯ್ಯು ಹಾಗೂ ದುರ್ಗಪ್ಪನ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ .

**ಪಾಟೀ ಸವಾಲುಃ 11 ನೇ ಪ್ರತಿವಾದಿ ಪರ ಶ್ರೀ ಎನ್ ಈ ಹೆಚ್ ವಕೀಲರಿಂದಃ**

ಮೇಲ್ಕಂಡ ಎಲ್ಲಾ ಪ್ರತಿವಾದಿಗಳ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ